ಇನ್ನೂ ಸೂರ್ಯೋದಯವಾಗಿಲ್ಲ. ಶರಣರು ಸತ್ಸಂಗಕ್ಕಾಗಿ ಮಹಾಮನೆಯತ್ತ ನಡೆದಿದ್ದಾರೆ. ಬಸವಣ್ಣನವರಿಗೆ ಶರಣು ಹೇಳಿ ತಮ್ಮ ತಮ್ಮ ಆಸನಗಳಲ್ಲಿ ಕುಳಿತುಕೊಳ್ಳುತ್ತಾರೆ.

ಅಮುಗಿ ದೇವಯ್ಯ:

ಹೊಲಬುಗೆಟ್ಟ ಶಿಶು ತನ್ನ ತಾಯ ಬಯಸುವಂತೆ ,
ಬಳಿದಪ್ಪಿದ ಪಶು ತನ್ನ ಹಿಂಡನರಸುವಂತೆ ,
ಬಯಸುತ್ತಿರ್ದೆನಯ್ಯಾ ನಿಮ್ಮ ಶರಣರ ಬರವನು ,
ಬಯಸುತ್ತಿರ್ದೆನಯ್ಯಾ ನಿಮ್ಮ ಭಕ್ತರ ಬರವನು .
ದಿನಕರನುದಯಕ್ಕೆ ಕಮಳ ವಿಕಸಿತವಾದಂತೆ
ಎನಗೆ ನಿಮ್ಮ ಶರಣರ ಬರವು ಕೂಡಲಸಂಗಮದೇವಾ. ॥ 365 ॥

ದಿನಕರನುದಯಕ್ಕೆ ಕಮಳ ವಿಕಸಿತವಾದಂತೆ ಎನಗೆ ನಿಮ್ಮ ಶರಣರ ಬರವು ಕೂಡಲಸಂಗಮದೇವಾ ಎಂದು ಹೇಳಲು ಕಾರಣವೇನು ತಂದೆ?

ಬಸವಣ್ಣ : ಸೂರ್ಯೋದಯವಾಗದಿದ್ದರೆ ಕಮಲ ಅರಳುವುದಿಲ್ಲ. ಕಮಲಕ್ಕೂ ಸೂರ್ಯನಿಗೂ ಅವಿನಾಭಾವ ಸಂಬಂಧ. ಇದಕ್ಕೆ ಸಮಯ ಬೇಕು. ಸಸಿ ಕಾಂಡವಾಗಿ ಎಲೆಯಾಗಿ ಮೊಗ್ಗಾಗಿ ಸೂರ್ಯನುದಯವಾದಾಗ ಕಮಲ ಅರಳುತ್ತದೆ. ಹಾಗೆಯೇ ಮಲ್ಲಿಗೆ ಸಸಿಯಾಗಿ, ಕಾಂಡವಾಗಿ ರೆಂಬೆಗಳ ಮೂಲಕ ನಳ ನಳಿಸಿ ಯೌವ್ವನಕ್ಕೆ ಬಂದು ಮೊಗ್ಗಾಗಿ ಅರಳಬೇಕಾದರೆ ಸಮಯ ಬೇಕು. ಗಾಳಿ ಬೆಳಕು ಭೂಮಿ ಜಲ ಬಳಸಿಕೊಂಡು ಹೂವಾಗಿ ಅರಳಿ ಪರಿಮಳ ಬೀರುತ್ತದೆ.

ತನು ಸದೃಢವಾಗಿ ಅರಿವಿನಿಂದ ಬೆಳೆಯಲು ಗಾಳಿ ಬೆಳಕು ಜಲ ಭೂಮಿ ಇದೆ. ಇದನ್ನು ಬಳಕೆ ಮಾಡಿಕೊಂಡು ಬೆಳಕಿಂಗೆ ಬೆಳಕಾಗಿ ಪ್ರಕಾಶಿಸಲು ತನುವಿನಲ್ಲಿ ಅರಿವು ಇದೆ, ಅದನ್ನು ಸಶಕ್ತವಾಗಿ ಬಳಕೆಮಾಡಿಕೊಳ್ಳುವ ಮನವೂ ಇದೆ. ಆದರೂ ಮನ ಅರಿವಿಗೆ ಶರಣು ಹೋದ ಶರಣರನ್ನು ಹುಡುಕುತ್ತದೆ. ಅರಿವಿಗೆ ದಾಸರಾದ ದಾಸರನ್ನು ಹುಡುಕುತ್ತದೆ. ಸಾದು ಸಂತರನ್ನು ಸತ್ಪುರುಷರನ್ನು ಅವರು ಬರೆದ ಗ್ರಂಥಗಳನ್ನು ಹುಡುಕುತ್ತದೆ. ಸತ್ಪುರುಷರಿಗೆ, ಅವರು ಬರೆದ ಗ್ರಂಥಗಳಿಗೆ ಮನ ದಾಸನಾಗುತ್ತದೆಯೇ ಹೊರತು ತನ್ನದೇ ಆದ ಅರಿವಿಗೆ ದಾಸನಾಗುವುದಿಲ್ಲ.

ದಾರಿ ತಪ್ಪಿಸಿಕೊಂಡ ಶಿಶುವಿಗೆ ತಾಯಿ ದೊರೆತರೆ ಸಂತೋಷವಾಗುತ್ತದೆ. ಹಿಂಡನಗಲಿದ ಪಶುವಿಗೆ ಹಿಂಡು ದೊರೆತರೆ ಸಂತೋಷವಾಗುತ್ತದೆ. ಇವು ದೂರವಾಗಿ ಸಮೀಪವಾಗುತ್ತವೆ. ಆದರೆ ತನುವಿನಲ್ಲಿ ಅರಿವು ಮತ್ತು ಮನ ದೂರವಿಲ್ಲ , ಸಮೀಪವೂ ಇಲ್ಲ , ಸಂಗಮವಾಗಿವೆ. ಆದರೂ ಮನ ಅರಿವೆಂಬ ಗುರುದೇವನನ್ನು ಬಳಸಿಕೊಳ್ಳುತ್ತಿಲ್ಲ. ಬೆಳಗುವ ಸೂರ್ಯನನ್ನು ಪ್ರಾರ್ಥಿಸಿದರೆ ಮನ ಬೆಳಗುವುದಿಲ್ಲ , ತಾವರೆಯಂತೆ ಅರಳುವುದಿಲ್ಲ. ಶರಣರನ್ನು ಬುದ್ಧ ಮಹಾವೀರನನ್ನು ಪ್ರಾರ್ಥಿಸಿದರೂ ಬೆಳಗುವುದಿಲ್ಲ , ಅವರು ಬರೆದ ಗ್ರಂಥಗಳನ್ನು ಓದಿದರೂ ಮನ ಬೆಳಗಿ ಅರಳುವುದಿಲ್ಲ. ಕಮಲದ ಹೂ ಅದರ ಸಸಿಯಲ್ಲಿದ್ದಂತೆ ಪರಿಮಳದ ಮಲ್ಲಿಗೆಯೂ ಅದರ ಸಸಿಯಲ್ಲಿದ್ದಂತೆ, ಅರಿವು ತನುವಿನಲ್ಲಿಯೇ ಇದೆ, ಮನ ಅದನ್ನು ಬಳಸಿಕೊಳ್ಳಬೇಕು. ಅಂಗದಲ್ಲಿ ಅರಿವು ಸಂಗಮವಾದುದನ್ನು ತಿಳಿದು ಸಂಗಮವಾಗಬೇಕು. ಅರಿವಿನೊಂದಿಗೆ ಸಂಗಮವಾಗಿದ್ದರೂ ಮನಕ್ಕೆ ಮರೆವಾಗಿದೆ. ಅದಕ್ಕಾಗಿಯೇ ಮನ ಮರ್ಕಟವಾಗಿದೆ. ಅರಿವಾದರೆ ಸಂಗಮನಾಥನೂ ತಾನೇ, ಮನವೆಂಬ ಮಹಾದೇವನೂ ತಾನೇ.

ಗುರುಭಕ್ತಯ್ಯ: ತಮ್ಮ ಈ ವಚನದಲ್ಲಿ ಅದೆಷ್ಟು ಬೆಡಗು ತುಂಬಿರುವಿರಿ ಬಸವರಸ. ಆ ವಚನದ ಸವಿಯನ್ನು ಉಂಡ ನಾವೆಲ್ಲರೂ ಧನ್ಯ. ತಮಗೆ ಶರಣು ಶರಣಾರ್ಥಿ.

ಬಸವಣ್ಣ : ಇಂದಿಗೆ ಇಷ್ಟು ಸಾಕು ನಾಳೆ ಮತ್ತೆ ಮುಂದುವರಿಸೋಣ. ಸಕಲ ಶರಣರಿಗೂ ಶರಣು ಶರಣಾರ್ಥಿ.

ಬಸವಣ್ಣನವರು ಉಣಬಡಿಸಿದ ಬ್ರಹ್ಮರಸ ಪಾನಮಾಡಿ ಅರಿವಿನ ಮತ್ತಿನಲ್ಲಿ ತೇಲಾಡುತ್ತಾ ಶರಣರು ತಮ್ಮ ತಮ್ಮ ಮನೆಗೆ ಮರಳಿದರು.

ವಿವಿಧ ಬೇಡಿಕೆ ಈಡೇರಿಸಲು ಸರ್ಕಾರಿ ಶಾಲಾ ಶಿಕ್ಷಕರು ಒತ್ತಾಯ

● **ಸುದ್ದಿಮೂಲ ವಾರ್ತೆ** ರಾಯಚೂರು, ಆ.08:
ಪದವಿ ಪೂರೈಸಿದ ಎಲ್ಲ ಶಿಕ್ಷಕರಿಗೂ ಪದವೀಧರ ಶಿಕ್ಷಕರೆಂದು ಪದನಾಮಿಕರಿಸಬೇಕು, ವೃಂದ ನೇಮಕಾತಿಯ ನಿಯಮ ಸರಿಪಡಿಸಲು ಸೇರಿ ವಿವಿಧ ಬೇಡಿಕೆ ಈಡೇರಿಸಲು ಜಿಲ್ಲಾ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ನೇತೃತ್ವದಲ್ಲಿ ಪ್ರತಿಭಟಿಸಲಾಯಿತು.

ಇಂದು ನಗರದ ಜಿಲ್ಲಾಧಿಕಾರಿ ಕಚೇರಿ ಬಳಿ ಸಂಘದ ನೇತೃತ್ವದಲ್ಲಿ ಸರ್ಕಾರಿ ಶಾಲಾ ಶಿಕ್ಷಕರು ಸ್ಥಾನಿಕ ಅಧಿಕಾರಿ ಮೂಲಕ ಮುಖ್ಯಮಂತ್ರಿ , ಶಿಕ್ಷಣ ಸಚಿವರಿಗೆ ಮನವಿ ಸಲ್ಲಿಸಿದರು.

2017ರವರೆಗೆ ನೇಮಕವಾದ ಶಿಕ್ಷಕರನ್ನು 1ರಿಂದ 7ಕ್ಕೆ ನೇಮಕವಾದ ಶಿಕ್ಷಕರೆಂದು ಪರಿಗಣಿಸಿ ಹೊಸ ವೃಂದ ಮತ್ತು ನೇಮಕಾತಿ ನಿಯಮಗಳು, 2017ರ ನಂತ ನೇಮಕವಾದ ಶಿಕ್ಷಕರಿಗೂ ಅನ್ವಯಿಸಬೇಕು. ಆದರೆ, 2016ಕ್ಕಿಂತ ಮೊದಲು ನೇಮಕವಾದವರಿಗೆ ಪೂರ್ವನ್ವಯಗೊಳಿಸಬಾರದು, ಈ ಬಗ್ಗೆ ಸರ್ಕಾರ ಕಾರ್ಯಾದೇಶ ಹೊರಡಿಸಿ 1ರಿಂದ 7ಕ್ಕೆ ನೇಮಕ ಹೊಂದಿದವರನ್ನು ಪಿಎಸ್‌ಟಿ ಎಂದು ಪದನಾಮ ಮಾಡಿ 1ರಿಂದ 5ತರಗತಿಯ ಶಿಕ್ಷಕರಿಗೆ ಸೀಮಿತಗೊಳಿಸಿದ್ದನ್ನು ಹಿಂಪಡೆಯಬೇಕು, ಅರ್ಹ ವಿದ್ಯಾರ್ಹತೆ ಪೂರೈಸಿ 2016ಕ್ಕಿಂತ ಮೊದಲು ನೇಮಕವಾದ 1ರಿಂದ 8ನೇ ತರಗತಿಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಖ್ಯೆ ಮುಗಿಯುವವರೆಗೂ ಅರ್ಹತೆ ಆಧಾರದಲ್ಲಿ ಪ್ರೌಢಶಾಲೆಗೆ ಬಡ್ತಿ ನೀಡಬೇಕು, ಸೇವಾ ಜೇಷ್ಠತೆ ಆಧಾರದ ಮೇಲೆ ಬಡ್ತಿ ನೀಡಬೇಕು, ಬಡ್ತಿ ಜೊತೆಗೆ ಪ್ರಾಥಮಿಕ ಶಾಲಾ ಸಹ ಶಿಕ್ಷಕರಿಗೆ ಸೇವಾ ಜೇಷ್ಠತೆಯ ರಕ್ಷಣೆ ನೀಡಲು ಆಗ್ರಹಿಸಿದರು.

ಈ ಪ್ರತಿಭಟನೆಯಲ್ಲಿ ಸಂಘದ ಅಧ್ಯಕ್ಷ ಚಂದ್ರಶೇಖರರೆಡ್ಡಿ, ಪ್ರ. ಕಾರ್ಯದರ್ಶಿ ಸಿದ್ದಲಿಂಗಪ್ಪ ಮುರಡಿ, ಸುರೇಶ ಕುರ್ಡಿ, ರಂಗನಾಥ, ತನುಜಾ, ಉಮಾದೇವಿ,ಶಿವಾನಂದ, ಸುಧಾಕರ, ಭೀಮೇಶ ನಾಯಕ, ಪದ್ಮಾವತಿ, ಪರಿಮಳಾ, ವೆಂಕುಬಾಯಿ, ಜನಾರ್ಧನ, ಸುರೇಶ, ಹನುಮಂತಪ್ಪ, ಕೃಷ್ಣಾ ಕುಲಕರ್ಣಿ, ಮಲ್ಲೇಶ ನಾಯಕ ಸೇರಿ ಅನೇಕ ಶಿಕ್ಷಕರು ಭಾಗವಹಿಸಿದ್ದರು.

ಉದ್ದಿಮೆ ಪರವಾನಿಗೆ ಕಡ್ಡಾಯ, ಇಲ್ಲದಿದ್ದರೆ ಕ್ರಮ

● **ಸುದ್ದಿಮೂಲ ವಾರ್ತೆ** ರಾಯಚೂರು, ಆ.08:
ನಗರಸಭೆಯ ಪರವಾನಿಗೆ ಇಲ್ಲದೆ ವ್ಯಾಪಾರ ವಹಿವಾಟು ಮಾಡುವವರ ವಿರುದ್ಧ ಕಠಿಣ ಕ್ರಮ ವಹಿಸಲಾಗುವುದು ಎಂದು ಎಚ್ಚರಿಸಿರುವ ಪೌರಾಯುಕ್ತ ಗುರುಸಿದ್ದಯ್ಯ ಮುಂದಿನ 15 ದಿನದಲ್ಲಿ ಪರವಾನಿಗೆ ಪಡೆಯಲು ಸೂಚಿಸಿದ್ದಾರೆ.

ನಗರದ ವ್ಯಾಪ್ತಿಯಲ್ಲಿರುವ ಅಂಗಡಿ, ವ್ಯಾಪಾರಗಳನ್ನು ಪರವಾನಿಗೆ ಇಲ್ಲದೆ ಮಾಡಿದ್ದು ಕಂಡು ಬಂದಿರೆ ಅಂತವರ ವಿರುದ್ಧ ಕರ್ನಾಟಕ ರಾಜ್ಯ ಮುನ್ಸಿಪಲ್ ಕಾಯಿದೆ 1964ರ ಪ್ರಕರಣ 257ರ ಪ್ರಕಾರ ತಮ್ಮ ವಿರುದ್ಧ ನ್ಯಾಯಾಲಯದಲ್ಲಿ ಮೊಕೊದ್ದಮೆ ಹೂಡಲಾಗುವುದು ಎಂದು ಎಚ್ಚರಿಸಿದ್ದಾರೆ.

ಉದ್ಯಮಿ ವ್ಯಾಪಾರ ಆರಂಭಿಸಿದ ದಿನದಿಂದ ಕಡ್ಡಾಯವಾಗಿ ಉದ್ದಿಮೆ ಪರವಾನಿಗೆ ಪಡೆಯಲು ನಗರಸಭೆಯಲ್ಲಿ ವಿಶೇಷವಾಗಿ ಪ್ರತ್ಯೇಕ ವಿಭಾಗ ಕಾರ್ಯ ನಿರ್ವಹಿಸುತ್ತಿದ್ದು ಪರವಾನಿಗೆ ಇಲ್ಲದವರು ಅರ್ಜಿ ಸಲ್ಲಿಸಿ ಸೂಕ್ತ ದಾಖಲೆಯೊಂದಿಗೆ 15 ದಿನದಲ್ಲಿ ಅನುಮತಿ ಪಡೆಯಲು ಸೂಚಿಸಿದ್ದಾರೆ.

ಪ್ರಮೀಳಾ, ಮಹಾಂತೇಶ ಪಾಟೀಲ ನಡೆ, ಶಾಲೆ ಕಡೆ | 61,900 ರೂ. ದೇಣಿಗೆ ಸಂಗ್ರಹ | ಸರ್ಕಾರಿ ಎಲ್‌ಕೆಜಿ-ಯುಕೆಜಿ ವಿದ್ಯಾರ್ಥಿಗಳ ಸಮವಸ್ತ್ರಕ್ಕೆ ವಿನಿಯೋಗ

ಮಗಳ ನಾಮಕರಣಕ್ಕೆ ಶಿಕ್ಷಕ ದಂಪತಿ ವಿನೂತನ ಪಯತ್ನಕ್ಕೆ ಮೆಚ್ಚುಗೆ

● **ಸುದ್ದಿಮೂಲ ವಾರ್ತೆ** ರಾಯಚೂರು, ಆ.08:
ಶಿಕ್ಷಕ ದಂಪತಿಗಳಿಬ್ಬರು ತಮ್ಮ ಮಗಳ ನಾಮಕರಣ ಕಾರ್ಯಕ್ರಮದಲ್ಲಿ ಸರ್ಕಾರಿ ಶಾಲೆಯ ಉಳಿವಿಗೆ, ಪ್ರೋತ್ಸಾಹಿಸಲು ದೇಣಿಗೆ ಸಂಗ್ರಹಿಸುವ ಮೂಲಕ ಕಾರ್ಯಕ್ರಮಕ್ಕೆ ಬಂದವರ ಗಮನ ಸೆಳೆದಿದ್ದಾರೆ.

ತಾಲೂಕಿನ ಶ್ರೀರಾಮನಗರ ಕ್ಯಾಂಪಿನ ಸರ್ಕಾರಿ ಶಾಲೆ ಶಿಕ್ಷಕ ಮಹಾಂತೇಶ ಬಿರಾದಾರ, ಅವರ ಪತ್ನಿ ಉಡಮಗಲ್ ಖಾನಾಪೂರದ ಪ್ರಾಥಮಿಕ ಶಾಲೆ ಸಹ ಶಿಕ್ಷಕಿ ಪ್ರಮಿಳಾ ಪಾಟೀಲ ವಿನೂತನವಾಗಿ ಯೋಚಿಸಿದ ಶಿಕ್ಷಕರಾಗಿದ್ದಾರೆ.

ಹೆಣ್ಣುಮಗು ಹುಟ್ಟಿತೆಂದರೆ ಬಹುತೇಕ ಕುಟುಂಬದವರು ಮೂಗು ಮುರಿಯುವುದೆ ಹೆಚ್ಚು ಅಂತವರ ಮನಸ್ಥಿತಿಯ ಮಧ್ಯೆಯೂ ಮಗಳ ಹುಟ್ಟಿದ ಖುಷಿಯ ಜೊತೆಗೆ ಸರ್ಕಾರಿ ಶಾಲೆಗಳ ಪ್ರೋತ್ಸಾಹಕ್ಕೆ ಮುಂದಾಗಿದ್ದು ಮಾದರಿಯೇ ಸರಿ. ಅದರಲ್ಲೂ ನಾಮಕರಣ ಎಂದರೇ ಮಗುವಿಗೆ, ದಂಪತಿಗೆ ಬಟ್ಟೆ ಆಯಾರ, ಆಟಿಕೆ ಸಾಮಾನು ಕೊಡುವುದು ಸಾಮಾನ್ಯ. ಇಲ್ಲಿ ಇಬ್ಬರೂ ನೌಕರರಾಗಿದ್ದರಿಂದ ವಿಭಿನ್ನವಾಗಿ ಆಲೋಚಿಸಿದ್ದು ಸಹ ಸ್ಫೂರ್ತಿದಾಯಕವೂ ಹೌದು ಎನ್ನಬಹುದು.

ಕಳೆದ ಶನಿವಾರ ತಮ್ಮ ನಿವಾಸದಲ್ಲಿ ನಡೆದ ಮಗಳ ನಾಮಕರಣ ಸಂದರ್ಭದಲ್ಲಿ ಆಹ್ವಾನಿಸಿದ ಬಂಧು, ಸ್ನೇಹಿತರಿಗೆ, ಆಪ್ತರಿಗೆ ತಮ್ಮ ಮಗಳಿಗೆ ಯಾವುದೇ ಆಯಾರ, ವಸ್ತ್ರ ನೀಡಬೇಕು ಎಂದು ಷರತ್ತು ಹಾಕಿ ಆಹ್ವಾನಿಸಿದ್ದರಲ್ಲದೆ, ಹಾಗೇನಾದರೂ ದೇಣಿಗೆ ನೀಡಬೇಕೆನಿಸಿದ್ದರೆ ಸರ್ಕಾರಿ ಶಾಲೆಗಳ ಅನುಕೂಲತೆಗಾಗಿ ಹುಂಡಿಗೆ ದೇಣಿಗೆ ನೀಡಿ ಎಂದು ಕೋರಿದ್ದರು.

ಮಹಾಂತೇಶ ಬಿರಾದಾರ ಸರ್ಕಾರಿ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿಯೂ ಆಗಿದ್ದರಿಂದ ಸದಾ ಸಮಾಜಮುಖಿ ಸೇವೆಗೆ, ತಮ್ಮ ಶಾಲೆಯ ಸೌಂದರೀಕರಣ, ಬಡ ಮಕ್ಕಳಿಗೆ ಸಹಾಯ, ಸಹಕಾರ ನೀಡುವ ತುಡಿತ ಹೊಂದಿದ ಕ್ರಿಯಾಶೀಲ ವ್ಯಕ್ತಿತ್ವ ಉಳ್ಳವರಾಗಿದ್ದರಿಂದ ಈ ರೀತಿ ವಿಭಿನ್ನವಾಗಿ ಆಲೋಚಿಸಿದ್ದಕ್ಕೆ ಸಹೋದ್ಯೋಗಿಗಳು, ಸ್ನೇಹಿತರು ಹರ್ಷ ವ್ಯಕ್ತಪಡಿಸಿದ್ದು . ಖುದ್ದು ಪತ್ನಿಯೂ ಸಹ ಪತಿಯ ಆಲೋಚನೆಗೆ ಜೊತೆಯಾಗಿದ್ದು ಮೆಚ್ಚುಗೆಗೆ ಪಾತ್ರವಾಗಿದೆ.

ಅಲ್ಲದೆ, ಮಗಳ ನಾಮಕರಣ ಸಮಾರಂಭಕ್ಕೆ ಆಗಮಿಸಿದವರು ಶಿಕ್ಷಕ ದಂಪತಿಗಳ ಈ ಮಾದರಿ ನಡೆಗೆ ವ್ಯಾಪಕ ಶ್ಲಾಘನೆಗಳು ಕೇಳಿ ಬಂದಿದೆ.

ಮಗಳ ನಾಮಕರಣದ ವೇಳೆ ಹುಂಡಿಯಲ್ಲಿ ಹಾಕಿದ ದೇಣಿಗೆಯನ್ನು ಲೆಕ್ಕ ಹಾಕಿದ್ದಾರೆ. ಹೊಸದಾಗಿ ಸರ್ಕಾರಿ ಶಾಲೆಗಳಲ್ಲಿ ಎಲ್‌ಕೆಜಿ, ಯುಕೆಜಿ ತರಗತಿ ಆರಂಭವಾಗಿದ್ದು, 36 ಇಸಿಸಿಇ ಶಾಲೆಗಳು ಆರಂಭವಾಗಿದ್ದು ಆ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ಶಾಲಾ ಸಮವಸ್ತ್ರ ನೀಡುವುದಿಲ್ಲ. ಹೀಗಾಗಿ, ದಂಪತಿಗಳು ಕ್ಷೇತ್ರಶಿಕ್ಷಣಾಧಿಕಾರಿಗಳ ಮಾರ್ಗದರ್ಶನದಲ್ಲಿ ತಮ್ಮ ಮಗಳ ನಾಮಕರಣಕ್ಕೆ ಬಂದವರು ಹುಂಡಿಗೆ 61 ಸಾವಿರ 900 ರೂ. ದೇಣಿಗೆ ಸಂಗ್ರಹವಾಗಿದ್ದು ದಂಪತಿಗಳು ವೈಯಕ್ತಿಕವಾಗಿ 10 ಸಾವಿರ ದೇಣಿಗೆ ನೀಡಲು ನಿರ್ಧರಿಸಿದ್ದಾರೆ. ಈ ಹಣದಲ್ಲಿ ಕನಿಷ್ಠ ಗ್ರಾಮೀಣ ಭಾಗದ 8, ನಗರ ಪ್ರದೇಶದಲ್ಲಿನ 2 ಸರ್ಕಾರಿ ಎಲ್‌ಕೆಜಿ,ಯುಕೆಜಿ ಮಕ್ಕಳಿಗೆ ಒಂದು ಸಮವಸ್ತ್ರ ಖರೀದಿಸಿ ನೀಡಲು ನಿರ್ಧರಿಸಿದ್ದಾರೆ.

ಮೊದಲಿಗೆ ಪತ್ನಿ ಕಾರ್ಯಕ್ರಮದಲ್ಲಿ ಬರುವ ಮಹಿಳೆಯರಿಗೆ ಸೀರೆ ಕುಪ್ಪಸ, ಬಳೆ, ಕುಂಕುಮ ಅರಿಶಿಣ ನೀಡಬೇಕು, ಪುರುಷರಿಗೆ ಒಂದು ಜೊತೆ ಬಟ್ಟೆ ನೀಡಿ ಸತ್ಕರಿಸಲು ನಿರ್ಧರಿಸಿದ್ದರು. ಆದರೆ, ಇದು ಬೇರೆಯ ಸಂದೇಶ ನೀಡಲಿದೆ ಎಂದು ದಂಪತಿಗಳು ಚರ್ಚಿಸಿದ್ದರಿಂದ ಶಾಲೆಗಳಿಗೆ ಏನಾದರೂ ಉಪಯೋಗ ಆಗುವ ನಿಟ್ಟಿನಲ್ಲಿ ಯೋಚಿಸಲು ನಿರ್ಧರಿಸಿದ್ದರ ಫಲವಾಗಿಯೇ ಈ ದೇಣಿಗೆಯ ಪರಿಕಲ್ಪನೆ. ಇದರಲ್ಲಿ ನಮ್ಮದೇನಿಲ್ಲ ಎಲ್ಲ ಸ್ನೇಹಿತರು, ಸಹೋದ್ಯೋಗಿಗಳ ಪ್ರೀತಿಯ ಫಲ ಎಂದು ಶಿಕ್ಷಕ ದಂಪತಿಗಳಾದ ಮಹಾಂತೇಶ ಬಿರಾದಾರ ಮತ್ತು ಪ್ರಮಿಳಾ ಪಾಟೀಲ ಸುದ್ದಿಮೂಲ ಸಂಪರ್ಕಿಸಿದಾಗ ತಿಳಿಸಿದರು.

ಒಟ್ಟಾರೆ ಸರ್ಕಾರಿ ಶಾಲೆ ಮತ್ತು ಅಲ್ಲಿನ ಮಕ್ಕಳಿಗೆ ಇಂತಹ ವಿನೂತನ ಯೋಚನೆ ಮೂಲಕ ಒಂದಷ್ಟು ಸಹಾಯವಾದರೆ ಅದುವೆ ದೊಡ್ಡ ಸಮಾಧಾನವಲ್ಲದೆ, ಉಳಿದವರಿಗೂ ಈ ಶಿಕ್ಷಕ ದಂಪತಿಗಳಿಗೆ ನಡೆ ಮಾದರಿಯಾದರೆ ಇನ್ನಷ್ಟು ಸರ್ಕಾರಿ ಶಾಲೆಗಳ ಸುಧಾರಣೆ, ಮಕ್ಕಳಿಗೂ ನೆರವಾಗಲಿದೆ.

ರೈಲ್ವೆ ಖಾಲಿ ಹುದ್ದೆ ಭರ್ತಿ, ರಿಯಾಯಿತಿ ಪಾಸ್‌ಗೆ ಎಐಡಿಡವೈಒ ಸಹಿ ಚಳುವಳಿ

● **ಸುದ್ದಿಮೂಲ ವಾರ್ತೆ** ರಾಯಚೂರು, ಆ.08:
ಭಾರತೀಯ ರೈಲ್ವೆಯಲ್ಲಿ ಖಾಲಿ ಇರುವ ಎಲ್ಲ ಹುದ್ದೆಗಳನ್ನು ಭರ್ತಿ ಮಾಡಬೇಕು, ರೈಲುಗಳಲ್ಲಿ ಕಾಯ್ದಿರಿಸದ ಮತ್ತು ಸ್ಲೀಪರ್ ಕೋಚಗಳನ್ನು ಹೆಚ್ಚಿಸಲು ಸೇರಿ ವಿವಿಧ ಬೇಡಿಕೆ ಈಡೇರಿಸಲು ಎಐಡಿಎಸ್‌ಓ ಸಹಿ ಸಂಗ್ರಹ ಚಳುವಳಿ ನಡೆಸಿತು.

ಇಂದು ಜವಾಹರ್ ಉದ್ಯಾನವನ, ಎಲ್‌ವಿಡಿ ಕಾಲೇಜ್ ವಾಯುವಿಹಾರ ಮಾಡುವ ನಾಗರೀಕರಿಂದ ಸಹಿ ಸಂಗ್ರಹ ಚಳುವಳಿಗೆ ನಿವೃತ್ತ ಬ್ಯಾಂಕ್ ಅಧಿಕಾರಿ ಶ್ಯಾಮಸುಂದರ್ ಚಾಲನೆ ನೀಡಿದರು.

ವಲಸೆ ಕಾರ್ಮಿಕರಿಗಾಗಿ ಸಂಪೂರ್ಣ ಕಾಯ್ದಿರಿಸಿದ ರೈಲುಗಳನ್ನು ಓಡಿಸಬೇಕು, ಹಿರಿಯ ನಾಗರಿಕರ ರಿಯಾಯಿತಿ ಸೌಲಭ್ಯ ಮರು ಸ್ಥಾಪಿಸಬೇಕು ಎಂಬ ಬೇಡಿಕೆ ಮಂಡಿಸಿದರು.

ಶ್ಯಾಮಸುಂದರ್ ಮಾತನಾಡಿ, ಕೋವಿಡ್ ಸಂದರ್ಭದಲ್ಲಿ ರೈಲ್ವೆ ಇಲಾಖೆಯು ಎಲ್ಲಾ ರಿಯಾಯಿತಿ ಸೌಲಭ್ಯಗಳನ್ನು ರದ್ದುಪಡಿಸಿದೆ. ಇದರಿಂದ ಸಾರ್ವಜನಿಕರಿಗೆ ಬಹಳ ತೊಂದರೆ ಆಗಿದೆ. ಹಿರಿಯ ನಾಗರಿಕರ ರಿಯಾಯಿತಿ ಸೌಲಭ್ಯವನ್ನು ಮರು ಜಾರಿ ಮಾಡುವಂತೆ ಹೇಳಿದರು.

ಎಐಡಿವೈಒ ಯುವಜನ ಸಂಘಟನೆಯ ಜಿಲ್ಲಾಧ್ಯಕ್ಷ ಚನ್ನಬಸವ ಜಾನೇಕಲ್ ಮಾತನಾಡಿ, ರೈಲ್ವೆ ಇಲಾಖೆಯಲ್ಲಿ 3.5 ಲಕ್ಷ ಸಿಬ್ಬಂದಿ ಕೊರತೆ ಇದೆ. ಗ್ರೂಪ್ ಸಿ ನಲ್ಲಿ 2,74,000 ಹುದ್ದೆಗಳು ಖಾಲಿ ಇವೆ. ಇವುಗಳನ್ನು ಭರ್ತಿ ಮಾಡಲು ಕೇಂದ್ರ ಸರ್ಕಾರ ಕೂಡಲೇ ಕ್ರಮ ಕೈಗೊಂಡು ನಿರುದ್ಯೋಗಿ ಯುವಕರಿಗೆ ಅನುಕೂಲ ಮಾಡಿಕೊಡಲು ಆಗ್ರಹಿಸಿದರು. ಪ್ರಯಾಣಿಕರ ಸುರಕ್ಷತೆಗಾಗಿ ರೈಲ್ವೆ ಇಲಾಖೆಯು ಸೂಕ್ತ ಕ್ರಮಗಳನ್ನು ಕೈಗೊಳ್ಳುವಂತೆ ಒತ್ತಾಯಿಸಿ ಈ ಚಳುವಳಿ ದೇಶದಾದ್ಯಂತ ನಡೆಯಲಿದೆ ಎಂದರು.

ನಿವೃತ್ತ ಬ್ಯಾಂಕ್ ವ್ಯವಸ್ಥಾಪಕ ಅಮರೇಶ್ ಆದೋನಿ, ಜಿಲ್ಲಾ ಕಾರ್ಯದರ್ಶಿ ವಿನೋದ್ ಕುಮಾರ್, ಯಲ್ಲಪ್ಪ, ಸಂದೀಪ್, ಮೌನೇಶ್, ಬಸವರಾಜ್ ಮುಂತಾದವರು ಭಾಗವಸಿದ್ದರು.

ಮಕ್ಕಳ ಪುಸ್ತಕ ಚಂದಿರ ಪ್ರಶಸ್ತಿಗೆ ಅರ್ಜಿ ಆಹ್ವಾನ

● **ಸುದ್ದಿಮೂಲ ವಾರ್ತೆ** ರಾಯಚೂರು, ಆ.08:
ಕರ್ನಾಟಕ ಬಾಲವಿಕಾಸ ಅಕಾಡೆಮಿ ವತಿಯಿಂದ 2023ನೇ ಸಾಲಿನಲ್ಲಿ ಮಕ್ಕಳ ಕ್ಷೇತ್ರದಲ್ಲಿ ರಚಿಸಲ್ಪಟ್ಟ ಮಕ್ಕಳ ಸಾಹಿತ್ಯದ ಕೃತಿಗಳನ್ನು ಮಕ್ಕಳ ಪುಸ್ತಕ ಚಂದಿರ ಪ್ರಶಸ್ತಿಗಾಗಿ ಅರ್ಹಅಭ್ಯರ್ಥಿಗಳಿಂದ ಆಹ್ವಾನಿಸಲಾಗಿದೆ.

ಜನವರಿ ಯಿಂದ ಡಿಸೆಂಬರ್ ತಿಂಗಳ ಅಂತ್ಯದ ಅವದಿಯಲ್ಲಿ ಪ್ರಕಟಗೊಂಡ ಮಕ್ಕಳ ಸ್ವರಚಿತ ಕವನ ಸಂಕಲನ, ನಾಟಕ,(ಪಠ್ಯಾಧಾರಿತ ಬಿಟ್ಟು) ಮಕ್ಕಳ ಕಾದಂಬರಿ, ವೈಜ್ಞಾನಿಕ ಲೇಖನಗಳ ಸಂಕಲನ, ಅನುವಾದಿತ ಕೃತಿ (ಯಾವುದೇ ಪ್ರ